# ನಾನೇನು ಮಾಡಿದೆನೊ ವೆಂಕಟರಾಯ

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 110.
2. **Note:** These lyrics are not available in other standard books that I referred.
3. **Note:** Singer has followed these wordings.

ರಾಗ: ಮೋಹನ ತಾಳ: ಅಟ್ಟ

ನಾನೇನು ಮಾಡಿದೆನೊ ವೆಂಕಟರಾಯ
ನೀನೆನ್ನ ಕಾಯಬೇಕೋ ॥ ಪ ॥

ಮಾನಾಭಿಮಾನವು ನಿನ್ನದು ಎನಗೇನು
ದೀನ ರಕ್ಷಕ ತಿರುಪತಿಯ ವೆಂಕಟರಾಯ ॥ ಅಪ ॥

ರಕ್ಕಸನಲ್ಲವೇನೋ ಪ್ರಹಲ್ಲಾದನು
ಚಿಕ್ಕವ ಧ್ರುವನಲ್ಲವೆ
ಉಕ್ಕಿ ಬರುವ ಕರ್ಮ ಮಾಡಿದಜಮಿಳ ನಿಮ್ಮ
ಅಕ್ಕನ ಮಗನೇನೋ ವೆಂಕಟರಾಯ ॥ 1 ॥

ಕರಿರಾಜ ಕರೆಸಿದನೆ
ದ್ರೌಪದಾದೇವಿ ಬರೆದೋಲೆ ಕಳುಹಿಸಿದಳೇ
ವರಋಷಿ ಪತ್ನಿ ಕಲ್ಲಾಗಿ ಸ್ತ್ರೀಯಾದದ್ದು
ಧರೆಯೆಲ್ಲ ಅರಿಯದೇನೋ ವೆಂಕಟರಾಯ ॥ 2 ॥

ಒಪ್ಪಿಡಿಯವಲಕ್ಕಿಯ ತಂದವನಿಗೆ
ಒಪ್ಪಿ ಕೊಟ್ಟೆಯೋ ಭಾಗ್ಯವ
ಸರ್ಪ ಶಯನ ಶ್ರೀ ಪುರಂದರ ವಿಠಲ
ಅಪ್ರಮೇಯನೇ ಸಲಹೋ ವೆಂಕಟರಾಯ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ರಕ್ಕಸನಲ್ಲವೇನೋ** – ಪ್ರಹ್ಲಾದನು ವಿಷ್ಣುಭಕ್ತನಾದರೂ ದೈತ್ಯನಾದ ಹಿರಣ್ಯಕಶಿಪುವಿನ ಮಗ; ದೈತ್ಯನೇ ತಾನೆ?

**ಧ್ರುವ** – ಉತ್ತಾನಪಾದರಾಯನ ಮಗ ಸಣ್ಣವನಲ್ಲವೆ? ಆ ಹುಡುಗನಿಗಾಗಿ ನೀನು ಬರಬಹುದೋ?

**ಅಜಾಮಿಳ** – ಕಾನ್ಯಕುಬ್ಜದ ಬ್ರಾಹ್ಮಣನಾದರೂ ದುರಾಚಾರಿಯಲ್ಲವೆ? ಅವನಿಗೆ ನೀನು ಸದ್ಗತಿಯನ್ನಿತ್ತೆಯಲ್ಲ?

**ಕರಿರಾಜ** – ಗಜೇಂದ್ರ. ಇಂದ್ರದ್ಯುಮ್ನನು ಪಾಂಡ್ಯದೇಶದ ಅರಸಾಗಿ ವಿಷ್ಣುಭಕ್ತನಾದರೂ ಅಗಸ್ತ್ಯರಿಂದ ಶಾಪ ಪಡೆದು ಆನೆಯಾದನಲ್ಲವೆ? ಅವನು ನಿನ್ನನ್ನೇನು ಕರೆಕಳುಹಿಸಿದನೆ? ಬರಿದೆ ಕೂಗಿದರೂ ಬಂದೆಯಲ್ಲ?

**ದ್ರೌಪದಾದೇವಿ** – ದುಃಶಾಸನನು ತನ್ನನ್ನು ಅಪಮಾನಗೊಳಿಸುತ್ತಿದ್ದಾಗ ದ್ರೌಪದಿಯು ನಿನ್ನನ್ನು ನೆನಸಿಕೊಂಡಳಷ್ಟೆ; ಅದಕ್ಕೇ ನೀನು ಒಲಿದೆಯಲ್ಲ!

**ವರಋುಷಿ ಪತ್ನಿ** – ಅಹಲೆ; ಗೌತಮನ ಹೆಂಡತಿಯಾದ ಅಹಲ್ಯೆ ಶಾಪದಿಂದ ಕಲ್ಲಾಗಿರುವಾಗ ರಾಮಾವತಾರದಲ್ಲಿ ಅವಳ ಶಾಪವನ್ನು ನೀಗಿಸಿದೆಯಲ್ಲವೆ?

**ಒಪ್ಪಿಡಿಯವಲಕ್ಕಿಯ ತಂದವನಿಗೆ** – ಕುಚೇಲನಿಗೆ ಒಂದು ಹಿಡಿ ಅವಲಕ್ಕಿಗೆ ಬದಲಾಗಿ ಸಕಲ ಸಂಪತ್ತನ್ನೂ ನೀನು ನೀಡಲಿಲ್ಲವೆ?

**Classification:** Keerthane
**Ankita:** sri purandara vittala
**Location:** Tirupati
**Category:** Vishnu Stuti
**Sub-Category:** Srinivasa, abhimana, Tirupati, prahallada, asura, Dhruva, karma, ajamila, akka, putra, gaja, draupadi, kagada, rushi, patni, kallu, bhumi, avalakki, sudhama, Bhagya, apameya
**Pravachana:** NA
**Explanation:** NA